S.C. No.37/2024
P.W.-4
C.W.-5

# 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ, (ಗಂಗಾವತಿ ಆಸೀನ)

## S.C. No.37/2024

ಇಂದು ದಿನಾಂಕ- **17.06.2026** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯದ ಸಾಕ್ಷಿ ಕಟ್ಟೆಯಲ್ಲಿ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು- | ಆನಂದ್ ಗೌಳಿ |
| ತಂದೆ ಹೆಸರು- | ಈರಣ್ಣ ಗೌಳಿ |
| ವಯಸ್ಸು- | 39 ವರ್ಷ |
| ಉದ್ಯೋಗ- | ಡ್ರೈವಿಂಗ್ ಸ್ಕೂಲ್ ಮ್ಯಾನೇಜರ್ |
| ವಾಸಸ್ಥಳ- | ಗೌಳಿನಗರ, ಗಂಗಾವತಿ |

**ಮುಖ್ಯ ವಿಚಾರಣೆ - ಪ್ರಾಜ್ಞ ಸರ್ಕಾರಿ ಅಭಿಯೋಜಕರಿಂದ -**

1. ಚಾಸಾ-4 ರವರು ನನಗೆ ಗೊತ್ತು. ದಿನಾಂಕ 21.05.2018 ರಂದು ನಾನು ಡ್ರೈವಿಂಗ್ ಸ್ಕೂಲ್‌ಗೆ ಹೋಗುವ ಸಲುವಾಗಿ ಗುಂಡಮ್ಮಕ್ಯಾಂಪ್ ಬಳಿ ಹೋಗುತ್ತಿದ್ದಾಗ ಬೆಳಿಗ್ಗೆ ಸುಮಾರು 07.00 ಗಂಟೆಗೆ ಚಾಸಾ-1 ರವರ ಮನೆಯ ಬಳಿ ಪೊಲೀಸರು ನಿಂತಿದ್ದರು. ಅಲ್ಲಿ ಏನಾಗಿದೆ ಎಂದು ನೋಡಲು ಹೋದೆನು. ಆಗ ಪೊಲೀಸರು ಪಂಚನಾಮೆ ಮಾಡುವ ಸಲುವಾಗಿ ನನ್ನನ್ನು ಕರೆದರು. ಅಲ್ಲಿ ಚಾಸಾ-1 ರವರು ಇದ್ದರು. ಅಲ್ಲಿ ಚಾಸಾ-1 ರವರು ಪೊಲೀಸರ ಬಳಿ ಆ ಸ್ಥಳದಲ್ಲಿ ಅವರ ಅಣ್ಣನಿಗೆ ಚಾಕು ಹಾಕಿದ್ದಾರೆ, ಬಡಿಗೆ ತೆಗೆದುಕೊಂಡು ಬಡಿದಿದ್ದಾರೆಂದು ಜಾಗ ತೋರಿಸಿದರು. ಅಲ್ಲಿ 2 ಬಡಿಗೆಗಳು ಬಿದ್ದಿದ್ದವು. ಆ ಜಾಗದಲ್ಲಿ ಮಣ್ಣಿನ ಮೇಲೆ ರಕ್ತದ ಕಲೆಗಳು ಇದ್ದವು. ಆ ಮಣ್ಣನ್ನು ಹಾಗೂ

ರಕ್ತದ ಕಲೆ ಇಲ್ಲದ ಮಣ್ಣನ್ನು ಪೊಲೀಸರು ತೆಗೆದುಕೊಂಡು ಒಂದು ಚೀಲದಲ್ಲಿ ಹಾಕಿಕೊಂಡರು. ಅವುಗಳಿಗೆ ಚೀಟಿ ಅಂಟಿಸುವ ಸಲುವಾಗಿ ಚೀಟಿಗಳಿಗೆ ನನ್ನ ಸಹಿಗಳನ್ನು ಅವುಗಳನ್ನು ಆ ಚೀಲಗಳಿಗೆ ಅಂಟಿಸಿದರು. ಬಡಿಗೆಗಳನ್ನು ಪೊಲೀಸರು ತೆಗೆದುಕೊಂಡು ಹೋದರು. ಸ್ಥಳದಲ್ಲಿ ಪಂಚನಾಮೆಯನ್ನು ಬರೆದರು. ಅದಕ್ಕೆ ನನ್ನ ಸಹಿಯನ್ನು ಪಡೆದುಕೊಂಡರು. ನಿ.ಪಿ.-3 ರಲ್ಲಿರುವ ನನ್ನ ಸಹಿಯನ್ನು ನಿ.ಪಿ.-3-ಬಿ ಎಂದು ಗುರುತಿಸಿದ್ದೇನೆ. ಪೊಲೀಸರು ಸ್ಥಳದಿಂದ ತೆಗೆದುಕೊಂಡು ಹೋದ ಬಡಿಗೆಯನ್ನು ನೋಡಿದರೆ ಗುರುತಿಸಬಹುದೇ ಎಂದರೆ ಸಾಕ್ಷಿ ನುಡಿಯುತ್ತಾರೆ, ನೋಡಬೇಕು. ನ್ಯಾಯಾಲಯದ ಮುಂದಿರುವ ಮುಮಾ-1 ಮತ್ತು 2 ಅನ್ನು ತೋರಿಸಿದಾಗ ಸಾಕ್ಷಿಯು ಅದನ್ನು ನೋಡಿ ಆ ಬಡಿಗೆಗಳೇ ಎಂದು ನನಗೆ ನೆನಪಿಲ್ಲ. ಅವುಗಳಲ್ಲಿ ಅಂಟಿಸಿದ್ದ ಚೀಟಿಗಳಲ್ಲಿನ ಸಹಿಗಳನ್ನು ತೋರಿಸಲಾಗಿ ಸಾಕ್ಷಿ ಆ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಗುರುತಿಸಿದ ಸಹಿಗಳನ್ನು ಮುಮಾ-1-ಎ ಹಾಗೂ ಮುಮಾ-2-ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಮುಮಾ-6 ಮತ್ತು 7 ನೋಡಿ ಗುರುತಿಸಿ ಅವುಗಳಲ್ಲಿ ಅಂಟಿಸಿರುವ ಚೀಟಿಗಳಲ್ಲಿನ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮುಮಾ-6-ಎ ಹಾಗೂ 7-ಎ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯನ್ನು ನುಡಿಯುತ್ತಿರುವ ಕಾರಣ ಪ್ರಾಜ್ಞ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೇಳಿದ್ದು ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಸಾಕ್ಷಿಯು

ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿರುವ ಕಾರಣ ಕೋರಿಕೆಯ ಮೇರೆಗೆ ಅನುಮತಿ ನೀಡಲಾಯಿತು.)

**ಪಾಟೀಸವಾಲು - ಪ್ರಾಜ್ಞ ಸರ್ಕಾರಿ ಅಭಿಯೋಜಕರಿಂದ -**

2. ನ್ಯಾಯಾಲಯದ ಮುಂದಿರುವ ಮುಮಾ-1 ಮತ್ತು 2ರ ಬಡಿಗೆಗಳನ್ನೇ ಆ ದಿನ ಪೊಲೀಸರು ಮಹಜರು ಮಾಡುವ ಸಮಯದಲ್ಲಿ ಸ್ಥಳದಲ್ಲಿ ಅಮಾನತ್ತುಪಡಿಸಿಕೊಂಡರು ಎಂದರೆ ಸರಿ.

**ಪಾಟೀಸವಾಲು - 1, 2, 4, 6 ರಿಂದ 9 ನೇ ಆರೋಪಿತರ ಪರ ವಕೀಲರಿಂದ -**

3. ಪೊಲೀಸರು ಪಂಚನಾಮೆಗೆ ಬರಲು ನನಗೆ ನೋಟಿಸ್ಸು ನೀಡಿದ್ದರೇ ಎಂದರೆ ನೆನಪಿಲ್ಲ. ದಿನಾಂಕ 21.05.2018 ಅಥವಾ ಅದರ ಹಿಂದಿನ ದಿನ ಪೊಲೀಸರು ನನ್ನ ಮನೆಯ ಬಳಿ ಬಂದು ಯಾವುದಾದರೂ ದಾಖಲೆಗಳಿಗೆ ಸಹಿ ಪಡೆದುಕೊಂಡು ಹೋದರೆ ಎಂದರೆ ಸಾಕ್ಷಿ ನುಡಿಯುತ್ತಾರೆ, ಇಲ್ಲ. ಸ್ಥಳಕ್ಕೆ ಯಾರೆಲ್ಲ ಪೊಲೀಸರು ಬಂದಿದ್ದರು ಎಂದು ನನಗೆ ಹೇಳಲಾಗುವುದಿಲ್ಲ. ಪಂಚನಾಮೆಯನ್ನು ಪೊಲೀಸರು ಬರೆದಿದ್ದು ಅವರ ಹೆಸರು ನನಗೆ ಗೊತ್ತಿಲ್ಲ. ಪಂಚನಾಮೆಯನ್ನು ನಾನು ಹೇಳಿ ಬರೆಯಿಸಿಲ್ಲ. ಇನ್ನೊಬ್ಬ ಪಂಚರ ಪರಿಚಯ ನನಗಿಲ್ಲ. ಪಂಚನಾಮೆ ಬರೆಯಲು ಸುಮಾರು ಒಂದೂವರೆ ಇಂದ ಎರಡು ತಾಸು ಆಯಿತು. ನಾನು ಮತ್ತು ಚಾಸಾ-1ರವರು ಸಂಬಂಧಿಕರು ಎಂದರೆ ಸಾಕ್ಷಿ ನುಡಿಯುತ್ತಾರೆ, ಅಲ್ಲ, ಒಂದೇ ಕುಲಸ್ಥರು. ನಾನು ಚಾಸಾ-1ರವರಿಗೆ ಸಂಬಂಧದಲ್ಲಿ ಭಾವನಾಗಬೇಕು ಎಂದರೆ ಸರಿಯಲ್ಲ. ನಾನು ಆ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುಮಾ-1 ಮತ್ತು 2ರ

ವಸ್ತುಗಳು ಆ ದಿನ ಅಲ್ಲಿ ಇರಲಿಲ್ಲ ಎಂದರೆ ಸಾಕ್ಷಿ ನುಡಿಯುತ್ತಾರೆ, 2 ಕಟ್ಟಿಗಳು ಇದ್ದವು, ಆದರೆ ಮುಮಾ-1 ಮತ್ತು 2ರ ಕಟ್ಟಿಗೆಗಳೇ ಎಂದು ನನಗೆ ಗೊತ್ತಿಲ್ಲ. ಚಾಸಾ-1ರವರ ಮನೆಗೆ ಮುಖ್ಯರಸ್ತೆಯಿಂದ ಹೋಗಲು ಒಂದು ದೊಡ್ಡ ಗೇಟ್ ಇದೆ ಎಂದರೆ ಸರಿ. ಅದೇ ಗೇಟ್ ಮೂಲಕ ಚಾಸಾ-1ರವರ ಮನೆಗೆ ಪ್ರವೇಶವಾಗಬೇಕು ಎಂದರೆ ಸರಿ. ಆ ಗೇಟಿನ ಮುಂದೆ ಗ್ಯಾರೇಜುಗಳು ಹಾಗೂ ಆಯಿಲ್ ಮಿಲ್ಲುಗಳು ಇವೆ ಎಂದರೆ ಸರಿ. ಪ್ರತಿದಿನ ಬೆಳಿಗ್ಗೆ 07.00 ಗಂಟೆಯಿಂದ ರಾತ್ರಿ ಸುಮಾರು 08.00 ಗಂಟೆಯವರೆಗೆ ಅಲ್ಲಿ ಹೆಚ್ಚು ಜನ ಓಡಾಡುತ್ತಿರುತ್ತಾರೆ ಎಂದರೆ ಸಾಕ್ಷಿ ನುಡಿಯುತ್ತಾರೆ, ಜಾಸ್ತಿ ಜನ ಇರುವುದಿಲ್ಲ, ಸ್ವಲ್ಪ ಜನ ಇರುತ್ತಾರೆ. ನಿ.ಪಿ.- 3ರ ದಾಖಲೆಗೆ ಹಾಗೂ ಚೀಟಿಗಳಿಗೆ ನಾನು ಪೊಲೀಸ್ ಠಾಣೆಯಲ್ಲಿ ಸಹಿಗಳನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೊಲೀಸರು ಮುಮಾ-1, 2, 6 ಮತ್ತು 7 ಜಪ್ತಿ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ-1ರವರು ನೀಡಿರುವ ಸುಳ್ಳು ದೂರಿಗೆ ಸಹಾಯವಾಗಲೆಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು - 5 ನೇ ಆರೋಪಿ ಪರ ವಕೀಲರಿಂದ -**

5ನೇ ಆರೋಪಿ ಪರ ವಕೀಲರು ತನ್ನ ಹಿರಿಯ ವಕೀಲರು ಕೊಪ್ಪಳ ನ್ಯಾಯಾಲಯದಲ್ಲಿ ಇರುವುದಾಗಿ ಕಾಲಾವಕಾಶವನ್ನು ಕೇಳಿದ್ದು ಅದು ಸಕಾರಣವಲ್ಲದೇ ಇರುವುದರಿಂದ ಪಾಟೀಸವಾಲು ಇಲ್ಲವೆಂದು ಪರಿಗಣಿಸಲಾಯಿತು.

S.C. No.37/2024
P.W.-4
C.W.-5

**<u>ಮರು ವಿಚಾರಣೆ - ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಗಣಕಯಂತ್ರದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಗಿದೆ.)

ಓ. ಹೇ. ಕೇ. ಸರಿ ಇದೆ.

(**ವೇದಮೂರ್ತಿ ಬಿ.ಎಸ್.**)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಪ್ಪಳ (ಗಂಗಾವತಿ ಆಸೀನ).